**"ಕ್ಷೀರ ಭಾಗ್ಯ ಯೋಜನೆಯಡಿ ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನಪುಡಿ ಸರಬರಾಜು ಮಾರ್ಗಗಳ ಷರತ್ತು ಮತ್ತು ನಿಬಂಧನೆಗಳು" :–**

1. ಅರ್ಜಿದಾರರು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ದರವನ್ನು ಪ್ರತಿ ಕೆ.ಜಿ ಗೆ ನಮೂದಿಸುವುದು.
2. **ಅರ್ಜಿದಾರರು ಟೆಕ್ನಿಕಲ್ ಟೆಂಡರ್ ಅರ್ಜಿಯನ್ನು (ತಾಂತ್ರಿಕ ಟೆಂಡರ್ ಅರ್ಜಿ) ತಪ್ಪದೇ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.**
3. **ಯಶಸ್ವಿಯಾದ ಗುತ್ತಿಗೆದಾರರು ಹಾಲಿನ ಪುಡಿಯನ್ನು ಶೇಖರಣೆ ಮಾಡುವ ಗೋದಾಮಿನ ವಿಳಾಸ ಮತ್ತು ಬಾಡಿಗೆ ಕರಾರು ಪತ್ರವನ್ನು ಅಥವಾ ಸ್ವಂತ ಗೋದಾಮು ಹೊಂದಿದ್ದಲ್ಲಿ, ಅದರ ವಿಳಾಸವನ್ನು ಮತ್ತು ಅಗತ್ಯ ದಾಖಲೆಗಳನ್ನು ಒಕ್ಕೂಟಕ್ಕೆ ಕಡ್ಡಾಯವಾಗಿ ಒದಗಿಸುವುದು.**
4. **ಯಶಸ್ವಿಯಾದ ಗುತ್ತಿಗೆದಾರರು ಹಾಲಿನ ಪುಡಿಯನ್ನು ಶೇಖರಣೆ ಮಾಡುವ ಗೋದಾಮು ಆಯಾ ತಾಲ್ಲೂಕಿನ ಹಾಲಿನ ಪುಡಿ ಬೇಡಿಕೆಗನುಣವಾಗಿ ಹಾಲಿನ ಪುಡಿ ಶೇಖರಣೆ ಮಾಡುವಷ್ಟು ಸ್ಥಳಾವಕಾಶ ಹೊಂದಿರಬೇಕು.**
5. **ಹಾಲಿನ ಪುಡಿಯನ್ನು ಶೇಖರಣೆ ಮಾಡುವ ಗೋದಾಮನ್ನು ಒಕ್ಕೂಟದ Additional Places Of Business ಎಂದು ನೊಂದಾಯಿಸಿಕೊಳ್ಳತಕ್ಕದ್ದು, ಒಕ್ಕೂಟದೊಂದಿಗೆ ನೊಂದಾಯಿಸಿಕೊಂಡ Additional Places Of Business ಗೋದಾಮಿನಲ್ಲಿಯೇ ಹಾಲಿನ ಪುಡಿಯನ್ನು ದಾಸ್ತಾನು (Storage) ಮಾಡಿಕೊಂಡು ನಂತರ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು.**
6. **Additional Places Of Business ಗೋದಾಮಿನಲ್ಲಿ ಹಾಲಿನ ಪುಡಿ ದಾಸ್ತಾನು ಹೊರತುಪಡಿಸಿ ಬೇರೆ ಯಾವುದೇ ಆಹಾರ ಪದಾರ್ಥ/ವಸ್ತುಗಳನ್ನು ಶೇಖರಣೆ ಮಾಡುವಂತಿಲ್ಲ ಹಾಗೂ ಸದರಿ ಗೋದಾಮುಗಳಿಗೆ ಇಲಿಗಳು ಬಾರದಂತೆ rodents proof ಬಳಸಿ ಇಲಿ, ಹೆಗ್ಗಣಗಳು ಮತ್ತು ಇತರೆ ಪರಬಕ್ಷಕಗಳ ಪ್ರವೇಶದಿಂದ ಮುಕ್ತವಾಗುವಂತೆ ಮಾಡಿರಬೇಕು ಹಾಲಿನ ಪುಡಿ ಹೊರತುಪಡಿಸಿ ಬೇರೆ ಆಹಾರ ಪದಾರ್ಥ/ವಸ್ತುಗಳನ್ನು ಶೇಖರಣೆ ಮಾಡಿದ್ದು ಕಂಡು ಬಂದಲ್ಲಿ ಟೆಂಡರ್ ನಿಯಮಾನುಸಾರ ದಂಡ ವಿಧಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.**
7. ತಮಗೆ ಹಾಲಿನ ಪುಡಿ ನೀಡಿರುವ ಸಮಯದಿಂದ **ಮೂರು** ದಿನದೊಳಗಾಗಿ (ರಜಾ ದಿನಗಳನ್ನು ಹೊರತುಪಡಿಸಿ) ಹಾಲಿನ ಪುಡಿಯನ್ನು ಶಾಲೆಗಳಿಗೆ ಸರಬರಾಜು ಮಾಡುವುದು.
8. ಹಾಲಿನ ಪುಡಿಯನ್ನು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ದರದಲ್ಲಿ ಲೋಡಿಂಗ್/ ಅನ್‌ಲೋಡಿಂಗ್ ಮತ್ತು ಟೋಲ್ ವೆಚ್ಚವು ಸೇರಿರುತ್ತದೆ.
9. ಹಾಲಿನ ಪುಡಿಯನ್ನು ನಿಗಧಿತ ಸಮಯದಲ್ಲಿ ಸರಬರಾಜು ಮಾಡುವುದು ಅತಿ ಮುಖ್ಯವಾಗಿರುತ್ತದೆ ಆದ ಕಾರಣ ಹಾಲಿನ ಪುಡಿಯನ್ನು ಯಾವುದೇ ವಿಳಂಬ ಮಾಡದೇ ಸರಬರಾಜಿಗೆ ಕ್ರಮವಿಡುವುದು.
10. ಹಾಲಿನ ಪುಡಿಯ ಜೊತೆಗೆ ಇತರೆ ಯಾವುದೇ ಪದಾರ್ಥಗಳನ್ನು ಸರಬರಾಜು ಮಾಡಲು ಅವಕಾಶವಿರುವುದಿಲ್ಲ
11. ಹಾಲಿನ ಪುಡಿ ಆಹಾರ ಪದಾರ್ಥವಾಗಿದ್ದು ಇದರ ಸರಬರಾಜು ಆಹಾರ ಸುರಕ್ಷತಾ ಖಾಯಿದೆಯ ಷರತ್ತುಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.
12. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನವನ್ನು ಒದಗಿಸುವುದು ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು
13. ಹಾಲಿನ ಪುಡಿ ಶಾಲೆಗಳಿಗೆ ಸರಬರಾಜಾದ ನಂತರ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ / ಇಲಾಖೆಯ ಅಧಿಕಾರಿಗಳಿಂದ ಸಹಿ ಹಾಗೂ ಮೊಹರು ಹೊಂದಿರುವ ಸ್ವೀಕೃತಿ ಪತ್ರವನ್ನು (ಸ್ವೀಕೃತಿ ಪತ್ರವು ಮೂರು ಪ್ರತಿ ಹೊಂದಿರುತ್ತದೆ) ಒಕ್ಕೂಟದಿಂದ ನೀಡುವ ನಿಗದಿತ ನಮೂನೆಯಲ್ಲಿ ಕಡ್ಡಾಯವಾಗಿ ಪಡೆದು 5 ದಿನದೊಳಗೆ ಒಕ್ಕೂಟಕ್ಕೆ ಸಲ್ಲಿಸುವುದು.

ಮುಂದುವರೆದಿದೆ.,

